ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 09-12-2024

ಮುಖ್ಯ ವಿಚಾರಣೆಃ ಶ್ರೀ. ಡಿ.ಕೆ.ಟಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿರುತ್ತದೆ. ಆದನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ನಮ್ಮ ವಿಜಯ ಬ್ಯಾಂಕ್ ಗೆ ಚೆಕ್ ಅನ್ನು ಹಾಜರುಪಡಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 1 ಎಂದು, ಕೋರಿಯರ್ ಚಲನ್ ರಶೀದಿಯನ್ನು ನಿಡಿ 2 ಎಂದು, ನಮ್ಮ ಬ್ಯಾಂಕ್ ನಿಂದ ಸೋಮವಾರಪೇಟೆ ಎಸ್.ಬಿ.ಐ ಗೆ ನೀಡಿದ ನೋಟಿಸನ್ನು ನಿಡಿ 3 ಎಂದು, ಅಂಚೆ ರಶೀದಿಯನ್ನು ನಿಡಿ 4 ಎಂದು, ಮತ್ತೊಂದು ನೋಟಿಸನ್ನು ನಿಡಿ 5 ಎಂದು, ಸದರಿ ನೋಟಿಸು ಸ್ವೀಕರಿಸಿದ ಬಗ್ಗೆ ಅಂಚೆ ಸ್ವೀಕೃತಿ ಹಿಂಬರಹವನ್ನು ನಿಡಿ 6 ಎಂದು, ಮತ್ತೊಂದು ರಿಜನಲ್ ಮ್ಯಾನೇಜರ್ ಎಸ್.ಬಿ.ಐ ಮಂಗಳೂರಿಗೆ ನೀಡಿರುವ ನೋಟಿಸನ್ನು ನಿಡಿ 7 ಎಂದು, ನೋಟಿಸು ಕಳುಹಿಸಿರುವ ಬಗ್ಗೆ ಕೋರಿಯರ್ ರಶೀದಿಯನ್ನು ನಿಡಿ 8 ಎಂದು, ಎಸ್.ಬಿ.ಐ ಯಿಂದ ನಮಗೆ ಬಂದ ಪತ್ರವನ್ನು ನಿಡಿ 9 ಎಂದು, ಎಸ್.ಬಿ.ಐ ರಿಜನಲ್ ಕಚೇರಿಯಿಂದ ನಮಗೆ ಬಂದ ಪತ್ರವನ್ನು ನಿಡಿ 10 ಎಂದು, ನಮ್ಮ ಬ್ಯಾಂಕಿನಿಂದ ಎಸ್.ಬಿ.ಐ ಸೋಮವಾರಪೇಟೆಗೆ ನೀಡಿದ ಮತ್ತೊಂದು ಪತ್ರವನ್ನು ನಿಡಿ 11 ಎಂದು, ಎಸ್.ಬಿ.ಐ ರವರು ನಮ್ಮ ಬ್ಯಾಂಕ್ ಗೆ ನೀಡಿದ ಉತ್ತರವನ್ನು ನಿಡಿ 12 ಎಂದು, ವಕೀಲರ ನೋಟಿಸಿಗೆ ನಮ್ಮ ವಕೀಲರ ಮೂಲಕ ನೀಡಿರುವ ಉತ್ತರವನ್ನು ನಿಡಿ 13 ಎಂದು, ಅಂಚೆ ಸ್ವೀಕೃತಿಯನ್ನು ನಿಡಿ 14 ಎಂದು, ಜಿ.ಪಿ.ಎ ಅನ್ನು ನಿಡಿ 15 ಎಂದು ಗುರುತಿಸಲಾಯಿತು. ನಮ್ಮ ಬ್ಯಾಂಕಿನವರು ಚೆಕ್ ಅನ್ನು ಕಳುಹಿಸಿದ ಬಗ್ಗೆ ಕೋರಿಯರ್ ರವರ ಬಳಿ ವಿಚಾರಿಸಿದಾಗ ಅವರು ನೀಡಿರುವ ರಶೀದಿಯನ್ನು ನೋಡಿ ಗುರುತಿಸುತ್ತೇನೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಎನ್.ಸಿ.ಸಿ ವಕೀಲರಿಂದ – 3 ನೇ ಪ್ರತಿವಾದಿ ಪರ ಃ-

ಬ್ಯಾಂಕ್ ಆಫ್ ಬರೋಡ ಮೊದಲು ವಿಜಯ ಬ್ಯಾಂಕ್ ಆಗಿತ್ತು. ದಿಃ01-04-2019 ರಂದು ವಿಜಯ ಬ್ಯಾಂಕ್ ಬ್ಯಾಂಕ್ ಆಫ್ ಬರೋಡದ ಜೊತೆ ವಿಲೀನ ಆಗಿ ಮುಂದಿನ ಎಲ್ಲಾ ವ್ಯವಹಾರವನ್ನು ಬ್ಯಾಂಕ್ ಆಫ್ ಬರೋಡ ಎಂಬ ಹೆಸರಿನಿಂದ ಮಾಡುತ್ತಿದ್ದೇವೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸಹ ಅದೇ ದಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ವಿಲೀನವಾಗಿರುತ್ತದೆ ಎಂದರೆ ಸರಿಯಲ್ಲ. ಅದು ಬೇರೆ ದಿನ ಆಗಿರುತ್ತದೆ. ಯಾವ ದಿನ ಸ್ಟೇಟ್ ಬ್ಯಾಂಕ್ ಮೈಸೂರು ಸ್ಟೇಟ್ ಬ್ಯಾಂಕ್ ಇಂಡಿಯಾ ಜೊತೆ ವಿಲೀನವಾಗಿ ಮರು ನಾಮಕಾರಣ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿಃ06-06-2019 ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ಮರು ನಾಮಕಾರಣ ಆಗಿರುತ್ತದೆ. ಸೋಮವಾರಪೇಟೆಯಲ್ಲಿ ಮೊದಲಿನ ಸ್ಟೇಟ್ ಬ್ಯಾಕ್ ಆಫ್ ಇಂಡಿಯಾ ಎಂಬ ಶಾಖೆ ಇತ್ತು ಎಂದರೆ ಸರಿ ಅದು ಈಗಲೂ ಇದೆ. ದಿಃ06-06-2019 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಎರಡು ಶಾಖೆಗಳು ಇತ್ತು. ಒಂದು ಶಾಖೆ ಮುಖ್ಯ ರಸ್ತೆಯಲ್ಲಿ ಇನ್ನೊಂದು ಶಾಖೆ ತ್ಯಾಗರಾಜ ರಸ್ತೆಯಲ್ಲಿತ್ತು.

ವಾದಿಯು ಸೋಮವಾರಪೇಟೆಯ ಮುಖ್ಯ ರಸ್ತೆಯ ಎಸ್.ಬಿ.ಐ ಶಾಖೆಗೆ ಸಂಬಂಧಿಸಿದ ಚೆಕ್ಕಾಗಿರುತ್ತದೆ. ನಾನು ಚೆಕ್ಕಿನ ಮೇಲೆ ಇರುವ ಚೆಕ್ ನ ಬ್ಯಾಂಕ್ ನ ಶಾಖೆಯನ್ನು ಖಾತ್ರಿ ಪಡಿಸಿಕೊಂಡು ಆ ಬ್ಯಾಂಕ್ ಗೆ ಕಳುಹಿಸಿರುತ್ತೇನೆ. ಚೆಕ್ ಅನ್ನು ಎಸ್.ಬಿ.ಐ ಮುಖ್ಯ ರಸ್ತೆ ಶಾಖೆಗೆ ಕಳಹಿಸಿದಾಗ ಕೋರಿಯರ್ ರವರು ನಮಗೆ ರಶೀದಿ ಕೊಡುವುದಿಲ್ಲ. ಆ ಬಗ್ಗೆ ನಮ್ಮ ಮಾಸಿಕ ಸ್ಟೇಟ್ ಮೆಂಟ್ ನಲ್ಲಿ ನಮೂದು ಇರುತ್ತದೆ. ಆ ಸ್ಟೇಟ್ ಮೆಂಟ್ ರವರು ಕೋರಿಯರ್ ರವರು ನಮ್ಮ ಬ್ಯಾಂಕ್ ಗೆ ಕೊಡುತ್ತಾರೆ. ಅದರಲ್ಲಿ ಯಾವ ಪತ್ರ ಯಾವ ಬ್ರಾಂಚ್ ಗೆ ಕೊಟ್ಟಿರುತ್ತಾರೆ ಎಂದು ನಮೂದು ಇರುತ್ತದೆ. ನಾವು ಕೋರಿಯರ್ ರವರಿಗೆ ಕಳುಹಿಸಿದಾಗ ಅವರಿಂದ ನಿಡಿ 2 ನ್ನು ಪಡೆದಿರುತ್ತೇವೆ. ಕೋರಿಯರ್ ರವರು ಹಾಜರುಪಡಿಸಿರುವ ದಾಖಲೆ ನೋಡಿ ಎಸ್.ಬಿ.ಎಂ ಸೋಮವಾರಪೇಟೆ ಶಾಖೆಗೆ ಕಳುಹಿಸಲಾಗಿರುತ್ತದೆ. ಹಳೆಯ ಎಸ್.ಬಿ.ಎಂ ಶಾಖೆಗೆ ಡೆಲಿವರಿಯಾಗಿರುತ್ತದೆ. ಆ ಚೆಕ್ಕು ಹಳೆಯ ಎಸ್.ಬಿ.ಎಂ ಗೆ ಸಂಬಂಧಪಟ್ಟ

ಚೆಕ್ಕು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡು ಬ್ರಾಂಚ್ ವಿಲೀನವಾಗಿರುವುದರಿಂದ ಯಾವ ಬ್ಯಾಂಕಿನಲ್ಲಾದರೂ ಚೆಕ್ ಅನ್ನು ಹಾಜರುಪಡಿಸಿ ಹಣ ಪಡೆಯಬಹುದು. ಈ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದೆ ಉದ್ದೇಶ ಪೂರ್ವಕವಾಗಿ ಖಾತೆಯಿಲ್ಲದ ಬ್ಯಾಂಕ್ ಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಬ್ಯಾಂಕ್ ಗೆ ಆ ಚೆಕ್ ಗೆ ಸಂಬಂಧ ಇಲ್ಲ ಎಂದರೆ ಆ ಕೆಲಸವನ್ನು ಕೋರಿಯರ್ ರವರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಹಳೆಯ ಎಸ್.ಬಿ.ಎಂ ಗೆ ಸೇರಿದ್ದು ಎಂದರೆ ಸರಿ. ನಿಡಿ 3 ನ್ನು ಹಳೆಯ ಎಸ್.ಬಿ.ಎಂ ಗೆ ಕಳುಹಿಸಿರುತ್ತೇವೆ ಆ ಬಗ್ಗೆ ನಿಡಿ 4 ಇರುತ್ತದೆ. ಅದು ತಲುಪಿರುವ ಬಗ್ಗೆ ದಾಖಲೆ ಇರುತ್ತದೆ ಅದು ನಿಡಿ 6 ಆಗಿರುತ್ತದೆ. ನಿಡಿ 6 ಯಾವ ದಿನಾಂಕ ತಲುಪಿರುತ್ತದೆ ಎಂದು ದಾಖಲೆಯಲ್ಲಿ ಸ್ಪಷ್ಟವಾಗಿ ಕಾಣುತ್ತಿಲ್ಲ. ನಿಡಿ 3 ನ್ನು ನೊಂದಾಯಿತ ಅಂಚೆ ಸ್ವೀಕೃತಿ ಮೂಲಕ ಕಳುಹಿಸಿರುವ ಉದ್ದೇಶ ಅದು ಕಾನೂನು ಬದ್ದ ವ್ಯವಹಾರಕ್ಕೆ ಸಂಬಂಧಿಸಿರುತ್ತದೆ. ಕೋರಿಯರ್ ಖಾಸಗಿ ಸಂಸ್ಥೆಯಾಗಿರುತ್ತದೆ ಎಂದರೆ ಸರಿ. ಅದಕ್ಕೆ ಸರ್ಕಾರದದಿಂದ ಅದೀಕೃತ ಮನ್ನಣೆ ಇರುವುದಿಲ್ಲ. ಚೆಕ್ ಅನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಪ್ರತಿನಿತ್ಯದ ವ್ಯವಹಾರವನ್ನು ಕೋರಿಯರ್ ಮೂಲಕ ಮಾಡುವುದರಿಂದ ಆ ಪ್ರಕಾರ ಮಾಡಿರುತ್ತೇವೆ. ನಿಡಿ 3 ನಮ್ಮ ಪ್ರತಿನಿತ್ಯದ ವ್ಯವಹಾರ ಅಲ್ಲ ಎಂದರೆ ಮೊದಲಿಗೆ ನೊಂದಣಿ ಅಂಚೆ ಮೂಲಕ ನಂತರ ಕೋರಿಯರ್ ಮೂಲಕ ಕಳಹಿಸಿರುತ್ತೇವೆ.

ನಿಡಿ 5 ನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿರುತ್ತೇವೆ. ಆ ಬಗ್ಗೆ ಅಂಚೆ ರಶೀದಿ ಇಲ್ಲ. ನಿಡಿ 5 ನ್ನು ಕಳುಹಿಸಿರುವ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ನಿಡಿ 3 ಮತ್ತು 4 ಪತ್ರಗಳು ಕಳುಹಿಸಿರುವ ಬಗ್ಗೆ ಒಂದೇ ಸ್ವೀಕೃತಿ ಹಿಂಬರಹ ಇರುವುದಿಲ್ಲ ಬೇರೆ ಬೇರೆ ಇರುತ್ತದೆ. ನಿಡಿ 5 ಪತ್ರ ಕಳುಹಿಸಿರುವ ಬಗ್ಗೆ ನಿಡಿ 6 ದಾಖಲೆ ಇರುತ್ತದೆ. ನಿಡಿ 3 ಮತ್ತು 5 ಪತ್ರಗಳನ್ನು ಬೇರೆ ಬೇರೇ ದಿನಾಂಕಗಳಲ್ಲಿ

ಕಳುಹಿಸಿರುತ್ತೇವೆ. ನಿಡಿ 7 ನ್ನು ಕೋರಿಯರ್ ಮೂಲಕ ಕಳುಹಿಸಿರುತ್ತೇವೆ. ಅವರಿಗೆ ತಲುಪಿದ ಬಗ್ಗೆ ದಾಖಲೆ ಇಲ್ಲ. ನಿಡಿ 7 ಕೋರಿಯರ್ ಮೂಲಕ ಕಳುಹಿಸಿರುವ ಬಗ್ಗೆ ದಾಖಲೆ ಇಲ್ಲ. ನಿಡಿ 8 ರಿಜನಲ್ ಎಸ್.ಬಿ.ಐ ಕಚೇರಿಗೆ ಕಳುಹಿಸಿದ ದಾಖಲೆ ಇರುತ್ತದೆ. ನಿಡಿ 9 ನ್ನು ಹಳೆಯ ಎಸ್.ಬಿ.ಎಂ ರವರು ಉತ್ತರ ನೀಡಿರುತ್ತಾರೆ. ನಿಡಿ 11 ನ್ನು ಎಸ್.ಬಿ.ಎಂ ಶಾಖೆಗೆ ಕಳುಹಿಸಿರುತ್ತೇವೆ. ನಾನು ಅಬ್ಬೂರುಕಟ್ಟೆ ಎಸ್.ಬಿ.ಐ ಶಾಖೆಯಲ್ಲಿ ಕೆಲಸ ಮಾಡುತ್ತಿರುವಾಗ ಸೋಮವಾರಪೇಟೆಯ ಮಹದೇಶ್ವರ ಬ್ಲಾಕ್ ನಲ್ಲಿ ವಾಸವಾಗಿದ್ದೆ. ಪ್ರತಿ ನಿತ್ಯ ಮನೆಯಿಂದ ಬ್ಯಾಂಕ್ ಗೆ ಹೋಗುತ್ತಿದ್ದೆ.

ವಾದಿಯ ಎಸ್.ಬಿ. ಖಾತೆ ನಮ್ಮ ಶಾಖೆಗೆ ಸಂಬಂಧಿಸಿರುತ್ತದೆ. ವಾದಿಯು ಅರುಣ್ ಕುಮಾರ್ ರವರ ಚೆಕ್ ಅನ್ನು ನಗದೀಕರಣಕ್ಕೆ ಕೊಟ್ಟಿರುತ್ತಾರೆ. ಆ ಚೆಕ್ ನ ಖಾತೆ ನಂ.31027956487 ಎಂದರೆ ಸರಿ. ಈ ಖಾತೆ ಎಸ್.ಬಿ.ಐ ತ್ಯಾಗರಾಜ ರಸ್ತೆಗೆ ಶಾಖೆಗೆ ಸಂಬಂಧಿಸಿದ್ದು ಎಂದರೆ ಸರಿ. ಆ ಬಗ್ಗೆ ಚೆಕ್ ಮೇಲೆ ಸೀಲು ಇತ್ತು ಎಂದರೆ ಸರಿ. ಆ ಚೆಕ್ ಅನ್ನು ಆ ಬ್ರಾಂಚ್ ಗೆ ನಾನಾಗಲೀ, ವಾದಿ ಆಗಲೀ, ಅರುಣ್ ಕುಮಾರ್ ರವರು ಹಾಜರು ಮಾಡಿಲ್ಲ ಎಂದರೆ ಸರಿ. ಆದ್ದರಿಂದ ಆ ಚೆಕ್ಕು ನಗದೀಕರಣ ಆಗಿಲ್ಲ ಎಂದರೆ ಸರಿಯಲ್ಲ. ಎರಡೂ ಶಾಖೆಗಳು ಒಂದೇ ಆಗಿರುವುದರಿಂದ ಯಾವ ಶಾಖೆಗಾದರೂ ಚೆಕ್ ಅನ್ನು ದಾಖಲಿಸಬಹುದು ಎಂದು ನುಡಿದಿರುತ್ತಾರೆ. ಎರಡು ಬ್ಯಾಂಕ್ ಗೆ ಸಿಬ್ಬಂದಿಗಳು ಬೇರೆ ಬೇರೆ ಎಂದರೆ ಸರಿ. ವಿಲೀನವಾದ ನಂತರ ಎರಡು ಬ್ಯಾಂಕ್ ಗಳಲ್ಲಿ ಹಣ ಪಡೆಯಬಹುದು. ಚೆಕ್ ಅನ್ನು ಕಳುಹಿಸಿದ ಸಮಯದಲ್ಲಿ ಆ ವ್ಯವಸ್ಥೆ ಇತ್ತು ಎಂದರೆ ಸರಿಯಲ್ಲ. 2019 ರಲ್ಲಿ ಸಹ ವ್ಯವಸ್ಥೆ ಇತ್ತು. ನಮ್ಮ ಕರ್ತವ್ಯ ಲೋಪವನ್ನು ಮುಚ್ಚಿಹಾಕಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ, ಆ ಸಮಯದಲ್ಲಿ ನಿಡಿ 1 ರಿಂದ 15 ದಾಖಲೆಗಳು ನನ್ನ ಬಳಿ ಇದ್ದವು. ಅದೇ ದಿನ ಹಾಜರುಪಡಿಸಲು ನನಗೇನು ತೊಂದರೆ ಇರಲಿಲ್ಲ ಎಂದರೆ ಸರಿ. ಎಲ್ಲಾ ದಾಖಲೆಗಳನ್ನು ಈ ದಿನ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 3 ಮತ್ತು 5 ಪತ್ರಗಳು ನಿಡಿ 6 ಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಡಿ 4 ಮತ್ತು 6 ರಲ್ಲಿ ಯಾವುದೋ ಬೇರೆ

ಪತ್ರಗಳನ್ನು ಕಳುಹಿಸಿ ಇದಕ್ಕೆ ಸಂಬಂಧಿಸಿದ್ದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 7 ನಿಡಿ 8 ಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ತ್ಯಾಗರಾಜ ರಸ್ತೆಯಲ್ಲಿರುವ ಎಸ್,ಬಿ.ಐ ಕ್ಕೂ ವಾದಿಯ ಜೊತೆ ಆಗಿರುವ ವ್ಯವಹಾರಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ - ವಾದಿಯ ಪರ ಃ-**

2019 ರಲ್ಲಿ ನಮ್ಮ ಬ್ಯಾಂಕ್ ನಲ್ಲಿ ನಾನು ಸೇರಿ 4 ಜನ ಸಿಬ್ಬಂದಿಗಳು ಇದ್ದೇವು. ನಾನು ಮತ್ತು ಇನ್ನೊಬ್ಬ ಸಿಬ್ಬಂದಿ ಸೋಮವಾರಪೇಟೆಯಲ್ಲಿ ವಾಸ ಮಾಡುತ್ತಿದ್ದೇವು. ಚೆಕ್ ಅನ್ನು ನಮ್ಮ ಬಳಿ ನಗದೀಕರಣಕ್ಕೆ ಕಳುಹಿಸಿದರೆ ಆ ಬ್ಯಾಂಕ್ ಗೆ ಕಳುಹಿಸಿ ಉತ್ತ್ರ ಪಡಿಯುವ ಅಧಿಕಾರ ಇತ್ತು. ಚೆಕ್ ಅನ್ನು ನಗದೀಕರಣಕ್ಕೆ ಹಾಜರುಪಡಿಸಿದರೆ 3 ರೀತಿ ಕಳುಹಿಸಬಹುದು ಒಂದು ಕೋರಿಯರ್ ಮೂಲು,2 ನೇ ಅಂಚೆ ಮೂಲಕ, 3 ನೇ ಮುದ್ದಾಂ ಮೂಲಕ ಕಳುಹಿಸಬಹುದು ಎಂದರೆ ಸರಿ. ನಾವು ಕೋರಿಯರ್ ನಲ್ಲಿ ಕಳುಹಿಸಿರುತ್ತೇವೆ, ಕೋರಿಯರ್ ಕಚೇರಿ ಅಬ್ಬೂರುಕಟ್ಟೆಯಲ್ಲಿ ಇಲ್ಲ ಎಂದರೆ ಸರಿ. ಕೋರಿಯರ್ ಕಚೇರಿ ಮತ್ತು ಎಸ್.ಬಿ.ಐ ಬ್ಯಾಂಕ್ ಎರಡು ಒಂದೇ ರಸ್ತೆಯಲ್ಲಿದೆ ಎಂದರೆ ಸರಿ. ಅಬ್ಬೂರುಕಟ್ಟೆಯಿಂದ ಬರುವಾಗ ಎಸ್.ಬಿ.ಐ ದಾಟಿ ನಾನು ಬರಬೇಕು ಎಂದರೆ ಸರಿ. ನಮ್ಮ ಕಚೇರಿಯ ವ್ಯವಹಾರ ಮುಗಿಯುವ ವೇಳೆಗೆ ಅಂಚೆ ಇಲಾಖೆಯ ವ್ಯವಹಾರ ಮುಗಿದಿರುತ್ತದೆ ಆದ ಕಾರಣದಿಂದ ಜಾಸ್ತಿ ಕೋರಿಯರ್ ಅವಳಂಬಿಸಿರುತ್ತೇವೆ. ನಮ್ಮ ಸಿಬ್ಬಂದಿ ಮೂಲಕ ಮುದ್ದಾಂ ಮೂಲಕ ಚೆಕ್ ಅನ್ನು ಕಳುಹಿಸಲು ತೊಂದರೆ ಇರಲ್ಲಿಲ.

ಅಬ್ಬೂರುಕಟ್ಟೆಯಲ್ಲಿ ಅಂಚೆ ಕಚೇರಿ ಇದೆ ಎಂದರೆ ಸರಿ. ಅಲ್ಲೇ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ತೊಂದರೆ ಇರಲಿಲ್ಲ. ನಮ್ಮ ಬ್ಯಾಂಕಿನ ಕಚೇರಿ ಸಮಯದಲ್ಲಿ ಅಬ್ಬೂರುಕಟ್ಟೆ ಅಂಚೆ ಕಚೇರಿ ತೆರೆದಿರುತ್ತದೆ ಎಂದರೆ ಸರಿ. ಚೆಕ್ ಅನ್ನು ನಗದೀಕರಣಕ್ಕೆ ಕವರಿಂಗ್ ಪತ್ರದ ಜೊತೆ ಕಳುಹಿಸುತ್ತೇವೆ. ಗ್ರಾಹಕರು ಕೊಟ್ಟ ಮೂಲ ಚೆಕ್ ಅನ್ನು ಕಳುಹಿಸುತ್ತೇವೆ. ಕವರ್ ಅನ್ನು ಸೀಲ್ ಮಾಡಿ

ಕಳುಹಿಸುತ್ತೇವೆ ಎಂದರೆ ಸರಿ. ಆ ಕವರ್ ಒಳಗೆ ಏನು ಇದೆ ಎಂದು ಯಾರಿಗೂ ಗೊತ್ತಾಗುವುದಿಲ್ಲ ಎಂದರೆ ಸರಿ. ದಿಃ10-06-2019 ರಲ್ಲಿ ನಾವು ಕಳುಹಿಸಿದ್ದ ಕವರ್ ನಲ್ಲಿ ವಾದಿ ನಮಗೆ ಕೊಟ್ಟಿದ್ದ ಚೆಕ್ಕು ಅದರ ಒಳಗೆ ಇತ್ತು ಎಂದು ಹೇಳಲು ನಮ್ಮ ಬಳಿ ದಾಖಲೆ ಇಲ್ಲ. ನಾನ್ ಸಿಟಿಎಸ್ ಚೆಕ್ ಎಂದರೆ ಚೆಕ್ಕಿನ ಬ್ಯಾಂಕ್ ಗೆ ಚೆಕ್ ಅನ್ನು ಪುರಸ್ಕರಿಸಲು ಆ ಶಾಖೆಗೆ ಕಳುಹಿಸಿಕೊಡುವುದು. ಚೆಕ್ ಅನ್ನು ಎಸ್.ಬಿ.ಐಗೆ ಕಳುಹಿಸಿದ ನಂತರ ನಿಗಧಿತ ಸಮಯ ಇರುತ್ತದೆ. ತುಂಬಾ ಸಮಯ ಆದ ನಂತರ ವಾದಿ ನಮಗೆ ವಿಚಾರಣೆ ಮಾಡಿರುತ್ತಾರೆ. ಇದರ ಮಧ್ಯೆ ಎಸ್.ಬಿ.ಐಗೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನ ಜವಾಬ್ದಾರಿಯನ್ನು ನಾವೇ ವಹಿಸಿಕೊಳ್ಳಬೇಕು ಎಂದರೆ ಸರಿಯಲ್ಲ, ಆದಕ್ಕೆ 3 ನೇ ಪ್ರತಿವಾದಿ ಜವಾಬ್ದಾರರು.

ವಾದಿ ನೀಡಿದ ಚೆಕ್ ಅನ್ನು ನಾವು 3 ನೇ ಪ್ರತಿವಾದಿಗೆ ಕಳುಹಿಸಿರುತ್ತೇವೆ, ಅವರು ನಮಗೆ ಚೆಕ್ ಅನ್ನು ಊರ್ಜಿತ ಮಾಡಿಲ್ಲ ಮತ್ತು ವಾಪಸ್ಸು ಮಾಡಿಲ್ಲ. ನಮ್ಮ ಗ್ರಾಹಕರಿಗೆ ನಾವೇ ಜವಾಬ್ದಾರರಾಗಿರುತ್ತೇವೆ. 3 ರಿಂದ 5 ನೇ ಪ್ರತಿವಾದಿಗಳು ವಾದಿಗೆ ಹಣ ಕೊಡಲು ಜವಾಬ್ದಾರರಲ್ಲ ಎಂದರೆ ಸರಿಯಲ್ಲ. ನಾವು ಚೆಕ್ ಅನ್ನು ಕಳುಹಿಸಿರುತ್ತೇವೆ ಆದರೆ ಅದಕ್ಕೆ ಅವರು ಉತ್ತರ ಕೊಟ್ಟಿಲ್ಲ. ನಮ್ಮ ಪ್ರಕಾರ ನಾವು ಕೊಟ್ಟ ಚೆಕ್ಕು ಊರ್ಜಿತ ಆಗಿಲ್ಲ ಮತ್ತು ಅದು ವಾಪಸ್ಸು ಸಹ ಬಂದಿಲ್ಲ. ನಾವು ನೀಡಿದ ಚೆಕ್ಕು 3 ನೇ ಪ್ರತಿವಾದಿ ಬಳಿ ಇರುತ್ತದೆ, ನಾವು ಅದಕ್ಕೆ ನೋಟಿಸನ್ನು ಮಾತ್ರ ಕೊಟ್ಟಿರುತ್ತೇವೆ. ಆದರೆ ಅವರ ಮೇಲೆ ಕಾನೂನು ಕ್ರಮ ಕೈಗೊಂಡಿಲ್ಲ. ದಾಖಲೆಗಳನ್ನು ವಾದಿ ನಮ್ಮ ಬಳಿ ಚೆಕ್ಕಿನ ಬಗ್ಗೆ ವಿಚಾರಣೆ ಮಾಡಿದ ನಂತರ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಬೇಜವಾಬ್ದಾರಿಯಿಂದ ನಡೆದುಕೊಂಡ ಕಾರಣ ವಾದಿಗೆ ಆರ್ಥಿಕ ನಷ್ಟ ಉಂಟಾಗಿದೆ ಎಂದರೆ ಸರಿಯಲ್ಲ. ವಾದಿ ನಮಗೆ ನೋಟಿಸು ಕೊಟ್ಟಿದ್ದು ಅದು ತಲುಪಿರುತ್ತದೆ. ಬ್ಯಾಂಕಿನಲ್ಲಿ ಎಫ್.ಡಿ ಮೇಲೆ ಶೇಕಡ ವಾರ್ಷಿಕ 10 ರಷ್ಟು ಬಡ್ಡಿ ಇತ್ತು ಎಂದರೆ ಸರಿಯಲ್ಲ ಶೇಕಡ 7 ಇತ್ತು. ಒಂದು ವೇಳೆ ಚೆಕ್ಕು ದೊರೆತರೂ ಸಹ ವಾದಿಯು 5 ನೇ ಪ್ರತಿವಾದಿಯಿಂದ ಕಾಲ ಮೀತಿ ಮೀರಿರುವುದರಿಂದ ಚೆಕ್ಕಿನ ಹಣವನ್ನು ವಸೂಲಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿ.

ವಾದಿಗೆ 2,50,000/- ಹಣವನ್ನು ಕೊಡಲು ನಾವೇ ಜಾವಾಬ್ದಾರರು ಎಂದರೆ ಸರಿಯಲ್ಲ. ವಕೀಲರ ನೋಟಿಸಿನ ಖರ್ಚನ್ನು ನಾವೇ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ.

ವಾದಿಗೆ ಸೋಮವಾರಪೇಟೆಯಲ್ಲಿ ಶೂ ಅಂಗಡಿ ಇರುತ್ತದೆ ಎಂದರೆ ಸರಿ. ನಮ್ಮ ಬೇಜವಾಬ್ದಾರಿಯಿಂದ ಉಂಟಾದ ಆರ್ಥಿಕ ನಷ್ಟದಿಂದ ಅವರ ಹಣ ನಮ್ಮ ಬಳಿ ತಡೆ ಹಿಡಿಯಲಾಗಿದೆ, ಆದ್ದರಿಂದ ನಾವು ವಾರ್ಷಿಕ 10 ರಂತೆ ಬಡ್ಡಿ ಕೊಡಲು ಜವಾಬ್ದಾರರು ಎಂದರೆ ಸರಿಯಲ್ಲ. ಅಂಚೆ ಮೂಲಕ ಕಳುಹಿಸಿದ್ದರೆ ಅದಕ್ಕೆ ಹಿಂಬರಹ ಬರುತ್ತದೆ ಎಂದರೆ ಸರಿ. ಮುದ್ದಾಂ ನಲ್ಲಿ ಕಳುಹಿಸಿದರೆ ಸಹಿ ಇರುತ್ತದೆ ಎಂದರೆ ಸರಿ. ಕೋರಿಯರ್ ಮೂಲಕ ಕಳುಹಿಸಿದರೆ ಸಹಿ ಮಾಡಿದ ರಶೀದಿ ಕೊಡುತ್ತಾರೆ. ಕೋರಿಯರ್ ನಿಂದ ಕಳುಹಿಸಿದರೆ ಡೆಲಿವರಿ ರಿಪೋರ್ಟ್ ಸಿಗುತ್ತದೆ. ಕೋರಿಯರ್ ಕಚೇರಿಯವರು ನಮಗೆ ಡೆಲಿವರಿ ರಿಪೋರ್ಟ್ ಬಗ್ಗೆ ರಶೀದಿ ಕೊಟ್ಟಿರುತ್ತಾರೆ, ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು ನಿಡಿ 16 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು 4 ನೇ ಪ್ರತಿವಾದಿ ಹಾಜರುಪಡಿಸಿರುತ್ತಾರೆ. ಎಸ್.ಬಿ.ಐ ಬ್ಯಾಂಕಿನ ಸೀಲು ಮತ್ತು ಸಹಿಯನ್ನು ನಿಡಿ 16 ಎ ಎಂದು ಗುರುತಿಸಲಾಯಿತು. ನಿಡಿ 16 ನ್ನು ಎಸ್.ಬಿ.ಐ ರವರಿಗೆ ತೋರಿಸಿರುತ್ತೇವೆ. ಕೋರಿಯರ್ ಕವರ್ ನಲ್ಲಿ ಚೆಕ್ಕು ಕಳುಹಿಸಿರುತ್ತೇವೆ. ಕವರ್ ಒಳಗಡೆ ಚೆಕ್ಕು ಅಲ್ಲದೇ ಬೇರೆ ಯಾವ ದಾಖಲೆ ಇತ್ತು ಎಂಬ ಬಗ್ಗೆ ಯಾವುದೇ ಉತ್ತರ ಅವರು ಕೊಟ್ಟಿಲ್ಲ. ವಾದಿಗೆ ಆಗಿರುವ ನಷ್ಟವನ್ನು ತುಂಬಿಕೊಡಲು 3 ರಿಂದ 5 ನೇ ಪ್ರತಿವಾದಿಗಳು ಜವಾಬ್ದಾರರಲ್ಲ ಎಂದರೆ ಸರಿಯಲ್ಲ. ನಾವು ಜವಾಬ್ದಾರರು ಎಂದರೆ ಸರಿಯಲ್ಲ. ವಾದಿ ಕೇಳಿದ ಪರಿಹಾರ ಪಡೆಯಲು ಅವರು ಅರ್ಹರು ಎಂದರೆ ಸರಿಯಲ್ಲ. ಚೆಕ್ಕು ಕಾಣೆಯಾಗಲು ನಮ್ಮ ಬೇಜವಾಬ್ದಾರಿಯೇ ಕಾರಣ ಎಂದರೆ ಸರಿಯಲ್ಲ. ಚೆಕ್ಕಿನ ಹಣ ಇಲ್ಲಿಯ ತನಕ ನಮ್ಮಿಂದಾಗಲೀ 5 ನೇ ಪ್ರತಿವಾದಿಯಿಂದಾಗಲೀ ವಾದಿಗೆ ಹೋಗಿಲ್ಲ ಎಂದರೆ ಸರಿ. ನಮ್ಮ ಬೇಜವಾ ಬ್ದಾರಿಯಿಂದ ವಾದಿಗೆ ನಷ್ಟವಾಗಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ಪರ ಪಾಟಿ ಸವಾಲು ಇಲ್ಲ ಎಂದ ತಿಳಿಸಿರುತ್ತಾರೆ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಸಹಿ/-

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.